

# ಸಂತಾನಭಾಗ್ಯಕ್ಕೆ ಎಂಬ್ರಿಯೊ ಡೊನೇಷನ್

**ಸಂತಾನಭಾಗ್ಯಕ್ಕಾಗಿ ಹಲವು ಕೃತಕ ಗರ್ಭಧಾರಣಾ ಸಾಧನಗಳು ಬಂದಿದ್ದು ಅವುಗಳಲ್ಲಿ ಪ್ರಮುಖ ಪ್ರಕ್ರಿಯೆಯಾಗಿರುವ 'ಎಂಬ್ರಿಯೊ ಡೊನೇಷನ್' ಇದೀಗ ಹೆಚ್ಚು ಜನಪ್ರಿಯವಾಗುತ್ತಿದೆ. ಮಕ್ಕಳಿಲ್ಲದೆ ಕೊರಗುವ ದಂಪತಿಗೆ ಇದೊಂದು ವರದಾನ.**

■ **ಉಮಾ ಅನಂತ್**

ರಾಧಾಗೆ ಮದುವೆಯಾಗಿ ಹದಿನಾರು ವರ್ಷಗಳಾಗಿವೆ. ಒಂದಾದರೂ ಮುದ್ದಾದ ಮಗು ಪಡೆಯಬೇಕು ಎಂಬ ಅದಮ್ಯ ಹಂಬಲವಿದ್ದರೂ ದಂಪತಿಗೆ ಸಂತಾನಭಾಗ್ಯ ಕೂಡಿ ಬಂದಿರಲಿಲ್ಲ. ಇಬ್ಬರಲ್ಲೂ ಫಲವತ್ತತೆ ಸಮಸ್ಯೆ ಇರುವುದರಿಂದ ಮಗುವಾಗುವುದು ಅಸಂಭವ ಎಂಬ ಕಟುವಾಸ್ತವ ಅರಿವಿದ್ದರೂ ಎಲ್ಲೋ ಒಂದು ಕಡೆ ನಮಗೆ ಮಗು ಆಗೇ ಆಗುತ್ತದೆ ಎಂಬ ಆಶಾಭಾವನೆ ಇಬ್ಬರಲ್ಲೂ ಇತ್ತು. ಬೆಂಗಳೂರಿನಲ್ಲೇ ಐದಾರು ಆಸ್ಪತ್ರೆಗಳಲ್ಲಿ ಸಂತಾನಕ್ಕಾಗಿ ಚಿಕಿತ್ಸೆ ಪಡೆದರೂ ಫಲ ಕಾಣದ ರಾಧಾ ಎಲ್ಲ ರೀತಿಯ ಪರೀಕ್ಷೆಗೊಳಗಾಗಿ ಕೊನೆಗೆ 'ಎಂಬ್ರಿಯೊ ದೇಣಿಗೆ ಪಡೆದರೆ ಮಗು ಖಚಿತ' ಎಂಬ ವೈದ್ಯರ ಸಲಹೆ ಪಡೆದು ಅದರ ಮೊರೆ ಹೋದರು. ಎಂಬ್ರಿಯೊ ದೇಣಿಗೆ ಪ್ರಕ್ರಿಯೆ ಚಿಕಿತ್ಸೆಯಿಂದ ರಾಧಾ ಮುದ್ದಾದ ಅವಳಿ ಮಕ್ಕಳಿಗೆ ಜನ್ಮ ನೀಡಿದರು.

ಇದು ರಾಧಾ ಕಥೆಯಾಯಿತು. ಪ್ರೀತಾ ಮತ್ತು ಅವರ ಪತಿ ರಾಜೇಶ್, ಕ್ರಮವಾಗಿ 34 ಮತ್ತು 38 ವರ್ಷ ವಯಸ್ಸಿನವರು. ಐದು ವರ್ಷಗಳ ಹಿಂದೆ ಮದುವೆಯಾಗಿದೆ. ಸತತ ಪ್ರಯತ್ನದ ನಂತರವೂ ಪ್ರೀತಿ ಗರ್ಭ ಧರಿಸುವಲ್ಲಿ ವಿಫಲರಾಗಿದ್ದರು. ಇಲ್ಲೂ